# ಕನ್ನಡಪ್ರಭ

**Friday, January 21st, 2011**


## ■ ಕರ್ನಾಟಕ ಪೊಲಿಟಿಕ್ಸ್: ಕೃತಿ, ಲೇಖಕ– ಡಾ।ಸಂದೀಪ ಶಾಸ್ತ್ರಿ, ಜೈನ್ ಯೂನಿವರ್ಸಟಿ, ವಿವಿಪುರ, ಬೆಳಗ್ಗೆ 11.




***ಡಾ. ಸಂದೀಪ್‌ಶಾಸ್ತ್ರಿ ಅವರ ಕರ್ನಾಟಕ ಪಾಲಿಟಿಕ್ಸ್ ಪುಸ್ತಕವನ್ನು ರಾಜ್ಯಪಾಲ ಎಚ್. ಆರ್. ಭಾರದ್ವಾಜ್ ಜೈನ್ ವಿಶ್ವವಿದ್ಯಾಲಯದಲ್ಲಿ ಬಿಡುಗಡೆ ಮಾಡಿದರು. ಡಾ. ಎನ್. ಸುಂದರ್‌ರಾಜನ್, ಡಾ. ಚೆನ್‌ರಾಜ್ ಜೈನ್ ಇದ್ದರು.***

**ಬೆಂಗಳೂರು:** ಕರ್ನಾಟಕದ ಪ್ರಸ್ತುತ ರಾಜಕೀಯ ಸನ್ನಿವೇಶಗಳು ಅಪಾಯಕಾರಿಯೆಡೆಗೆ ಸಾಗುತ್ತಿವೆ ಎಂದು ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ತಿಳಿಸಿದ್ದಾರೆ. ಗುರುವಾರ ಜೈನ್ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಲಾಗಿದ್ದ ಜೈನ್ ವಿಶ್ವವಿದ್ಯಾಲಯದ ಕುಲಪತಿ ಡಾ.ಸಂದೀಪ್ ಶಾಸ್ತ್ರಿ ರಚಿತ 'ಕರ್ನಾಟಕ ಪಾಲಿಟಿಕ್ಸ್' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು. ಕರ್ನಾಟಕ ಭಾರತದ ರಾಜಕೀಯ ವ್ಯವಸ್ಥೆಗೆ ಅನೇಕ ಗಣ್ಯರನ್ನು ಕೊಡುಗೆಯಾಗಿ ನೀಡುವುದರಲ್ಲಿ ಪ್ರಮುಖ ಸ್ಥಾನದಲ್ಲಿದೆ. ಕರ್ನಾಟಕದಿಂದ ಆಯ್ಕೆಯಾದ ಅನೇಕ ಸಂಸದರು ರಾಷ್ಟ್ರದ ಭವಿಷ್ಯವನ್ನು ಉಜ್ವಲಗೊಳಿಸುವಲ್ಲಿ ತಮ್ಮದೇ ಆದ ಪಾತ್ರ ವಹಿಸಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿನ ರಾಜಕೀಯ ಅಪಾಯಕಾರಿ ಹಾದಿಯಲ್ಲಿ ಸಾಗುತ್ತಿದೆ. ಆದ್ದರಿಂದ ಉತ್ತಮ ಆಡಳಿತ ಪಾಂಡಿತ್ಯವನ್ನೊಳಗೊಂಡವರು ರಾಜಕೀಯದಲ್ಲಿ ತೊಡಗಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ತಿಳಿಸಿದರು. ಜೈನ್ ವಿಶ್ವವಿದ್ಯಾಲಯ ಯುವಜನತೆಗೆ ಉತ್ತಮ ಶಿಕ್ಷಣ ನೀಡುವುದರ ಮೂಲಕ ದೇಶವನ್ನು ಮುನ್ನಡೆಸುವ ಕಾರ್ಯದಲ್ಲಿ ನಿರತವಾಗಿದೆ. ವಿವಿಗಳು ರಾಷ್ಟ್ರಮಟ್ಟದಲ್ಲಿ ಮಾತ್ರವಲ್ಲದೇ ವಿದೇಶಿ ವಿವಿಗಳನ್ನು ಮೀರಿಸುವ ಸ್ಪರ್ಧಾತ್ಮಕ ಯುಗದ ಅಗತ್ಯತೆಗಳನ್ನು ಪೂರೈಸಬೇಕು ಎಂದು ತಿಳಿಸಿದರು. ಜೈನ್ ವಿವಿ ಕುಲಪತಿ ಡಾ.ಆರ್.ಚೆನ್‌ರಾಜ್ ಜೈನ್, ಉಪಕುಲಪತಿ ಡಾ.ಎನ್. ಸುಂದರ್‌ರಾಜನ್ ಮತ್ತು ಕುಲಸಚಿವ ಪ್ರೊ.ಎನ್.ವಿ.ಎಚ್. ಕೃಷ್ಣನ್ ಕಾರ್ಯಕ್ರಮದಲ್ಲಿ ಹಾಜರಿದ್ದರು.